# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಶಹಬಾದ</u>

**CC No: 2070/2021**

CW:2 PW :3

| | | |
|---|---|---|
| ಹೆಸರು | : | ದೇವೆಂದ್ರ |
| ತಂದೆಯ ಹೆಸರು | : | ಶರಣಪ್ಪ ನಗನೂರ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಚಾಲಕ |
| ಸ್ಥಳ | : | ಶಹಾಬಾದ |

**( ದಿಃ 02-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಮುಖ್ಯ ವಿಚಾರಣೆ: ಸ.ಸ.ಅ ವಕೀಲರಿಂದ</u>**

ಸಾಕ್ಷಿಗೆ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಸಿ.2 (ಬಿ) ಗುರುತಿಸಲಾಯಿತು. ನನಗೆ ಚಾಸಾ-1 ಮತ್ತು 3 ಪರಿಚಯ ಇಲ್ಲ. ಪೋಲೀಸರು ನನ್ನನ್ನು ಎಲ್ಲಿಯೂ ಕರೆಸಿಲ್ಲ ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಈಗ ಸುಮಾರು 2 ವರ್ಷಗಳ ಹಿಂದೆ ಕಚೇರಿಯಲ್ಲಿ ಸಹಿ ಮಾಡಿರುತ್ತೇನೆ. ಅದು ಯಾವ ದಾಖಲೆ ಅದರಲ್ಲಿ ಏನು ಬರೆದಿದ್ದಾರೆ ಎಂಬುವುದು ನನಗೆ ಮಾಹಿತಿ ಇರುವುದಿಲ್ಲ.

**(ಈ ಹಂತದಲ್ಲಿ ಸ.ಸ. ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)**

**<u>ಪಾಟೀ ಸವಾಲು: ಸ.ಸ. ಅಭಿಯೋಜಕರಿಂದ</u>**

ದಿನಾಂಕ: 06-10-2020 ರಂದು ಸಾಯಂಕಾಲ 05-15 ರಿಂದ 06-15 ರವರೆಗೆ ಶಹಾಬಾದದ ಬೆಂಡಿ ಬಜಾರ ಕಿರಾಣಿ ಅಂಗಡಿಯಲ್ಲಿ ಆರೋಪಿತನು ತೋರಿಸಿದ ನವಸಾಗರದ 800 ಉಂಡೆಗಳು ಅಂದಾಜು 20 ಕೆ. ಜಿ ಕೊಳೆದ ಬೆಲ್ಲವನ್ನು ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಪಂಚನಾಮೆ ಮಾಡಿ ಶಹಾಬಾದ ಪೊಲೀಸ್ ಠಾಣೆ ಚಾಸಾ-1 ರವರು ಜಪ್ತಿ ಮಾಡಿಕೊಂಡಿರುತ್ತಾರೆ ಅಂದರೆ ಸರಿಯಲ್ಲ. ನಿಪಿ-2 ರಲ್ಲಿ ಬರೆದ ಅಂಶಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

**<u>ಪಾಟೀ ಸವಾಲು:</u> ಆರೋಪಿತರ ಪರ ಶ್ರೀ ಸಿ. ಎಸ್. ಪಿ. ವಕೀಲರಿಂದಃ**

ಪಾಟೀ ಸವಾಲು ಇರುವುದಿಲ್ಲ.

**ಮರುವಿಚಾರಣೆ: ಇರುವುದಿಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೆ. ಸರಿ ಇದೆ.**

**-Sd-**

**ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ.**

**ನ್ಯಾಯಾಧೀಶರು, ಶಹಬಾದ.**